

ಪ್ರಯಾಣವಾಗಿ ವಿಸ್ತರಣೆಗೊಂಡದ್ದು ಅದರ ದೊಡ್ಡ ಯಶಸ್ಸು ಅನಿಸುತ್ತದೆ. ಕರ್ನಾಟಕದ ಅದೆಷ್ಟು ಕಡೆ ಈ ಚಳವಳಿ ಗಟ್ಟಿಯಾಗಿ ನಡೆಯಿತು ಅನ್ನೋದನ್ನು ಈಗ ನೆನಪಿಸಿಕೊಂಡರೆ ಸಂತೋಷ, ಸಮಾಧಾನ ಎರಡೂ ಆಗುತ್ತೆ. ತುಮಕೂರು, ಶಿವಮೊಗ್ಗ, ಭದ್ರಾವತಿ, ಕೋಲಾರ, ಗುಲ್ಬರ್ಗಾ, ಹೀಗೆ ಎಲ್ಲ ಕಡೆ ಇದು ಹಬ್ಬಿತು. ಒಂದೆರಡು ಉದಾಹರಣೆ ಕೊಡ್ತೀನಿ; ಕಬಡ್ಡಿ ಆಟದ ಓರ್ವ ರೈಡರ್ ರೈಡ್ ಮಾಡುವ ಮುನ್ನ 'ಜೈ ಬಸವಲಿಂಗಪ್ಪ' ಅಂದು, ನಂತರ ಕಬಡ್ಡಿ ಕಬಡ್ಡಿ ಅನ್ನುತ್ತಾ ನುಗ್ಗುತ್ತಿದ್ದ!

ನಾನು ಮುಂದೊಂದು ದಿನ ಒರಿಸ್ಸಾದ ಭುವನೇಶ್ವರದ ಸರ್ಕಾರಿ ಗೆಸ್ಟ್ ಹೌಸ್‌ನಲ್ಲಿ ತಂಗಿದ್ದಾಗ, ಅಲ್ಲಿ ಉದ್ಯಾನದಲ್ಲಿ ಒಂದೆರಡು ಕರಪತ್ರಗಳು ಬಿದ್ದಿದ್ದವು. ಅದರಲ್ಲಿ ಫರ್ ಕ್ಯಾಪ್ ಧರಿಸಿದ್ದ ವ್ಯಕ್ತಿಯ ಚಿತ್ರವಿತ್ತು. ಕೈಗೆತ್ತಿಕೊಂಡು ನೋಡಿದಾಗ ಅದರಲ್ಲಿದ್ದದ್ದು ಬಸವಲಿಂಗಪ್ಪನವರ ಫೋಟೊ. ಕರಪತ್ರ ಒಡಿಯಾ ಭಾಷೆಯಲ್ಲಿತ್ತು. ವಿಚಾರಿಸಿದಾಗ, ಅದು ತಲೆಯ ಮೇಲೆ ಮಲಹೊರುವ ಪದ್ಧತಿಯ ವಿರುದ್ಧ ಬಸವಲಿಂಗಪ್ಪನವರು ಕರ್ನಾಟಕದಲ್ಲಿ ಜಾರಿಗೊಳಿಸಿದ್ದ ಕಾಯ್ದೆಗೆ ಸಂಬಂಧಿಸಿತ್ತು. ಒರಿಯಾ ದಲಿತ ಸಮುದಾಯ ಹೊರತಂದಿದ್ದ ಮೆಚ್ಚುಗೆಯ ಕರಪತ್ರ ಅದಾಗಿತ್ತು. ಇಂಥ ಅನೇಕ ಘಟನೆಗಳು ನೆನಪಾಗುತ್ತವೆ.

**◆ ಖಡ್ಗವಾಗಲಿ ಕಾವ್ಯ ಒಂದು ಘೋಷಣೆಯಾಗಿ ಮಾತ್ರವಲ್ಲದೆ, ನಡೆಯಬೇಕಾದ ದಾರಿಯ ದೀಪವಾಗಿಯೂ ಕೆಲಸ ಮಾಡಿತು...**

ಖಂಡಿತಾ, ಭಾವಗೀತೆಯೊಂದು ಜನರ ಮನಸ್ಸಿನಲ್ಲಿ ಸದಾ ಉಳಿದು ಅವರನ್ನು ಉದ್ದೀಪಿಸುವಂತೆ ಈ ಘೋಷಣೆ ಜನರನ್ನು ಒಳಗಿನಿಂದ ಬೌದ್ಧಿಕವಾಗಿಯೂ ಎಚ್ಚರಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡಿತು ಅಂತ ಈಗ ಅನಿಸುತ್ತದೆ. ಒಂದು ಪ್ರಸಂಗವನ್ನು